<u>ದಿನಾಂಕ 25-06-2019 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>: ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ :</u>

2001-2002 ರಲ್ಲಿ ನಮ್ಮ ತಂದೆ ಆರೋಗ್ಯವಾಗಿದ್ದರು. ನಮ್ಮ ತಂದೆಗೆ ಬಿ ಪಿ ಶುಗರ್ ಇರಲಿಲ್ಲ. ಯಾವ ಸಾಲಿನಲ್ಲಿ ನಮ್ಮ ತಂದೆಯವರು ನಮ್ಮ ತಾಯಿಗೆ ಆಸ್ತಿ ಬಿಟ್ಟು ಕೊಟ್ಟರು ಅಂತಾ ನನಗೆ ಗೊತ್ತಿಲ್ಲ. ಯಾವ ದಾಖಲೆಗಳ ಪ್ರಕಾರ ನಮ್ಮ ತಂದೆಯವರು ನಮ್ಮ ತಾಯಿಗೆ ಆಸ್ತಿ ಬಿಟ್ಟು ಕೊಟ್ಟರು ಅಂತಾ ನನಗೆ ಗೊತ್ತಿಲ್ಲ. ಆ ದಾಖಲೆ ಪತ್ರಕ್ಕೆ ಯಾರು ಯಾರು ಸಹಿ ಮಾಡಿದ್ದಾರೆ ಅಂತಾ ನನಗೆ ಗೊತ್ತಿಲ್ಲಾ. 2002 ರಲ್ಲಿ ನನ್ನ ವಯಸ್ಸು 16 ಇರಬಹುದು. ನಾನು ವಯಸ್ಕಳಾದ ನಂತರ ನಿಪಿ-12 ಕಾನೂನು ಬಾಹಿರವಾಗಿದೆ ಎಂದು ಅದನ್ನು ನಾನ ಪ್ರಶ್ನಿಸಿರುವುದಿಲ್ಲಾ.

2003 ರಲ್ಲಿ ನಮ್ಮ ಮನೆತನಕ್ಕೆ ಎಷ್ಟು ಸಾಲ ಇತ್ತು ಅಂತಾ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ 6 ನೇ ಪ್ರತಿವಾದಿಗೆ 2003 ರ ಸೆಪ್ಟಂಬರ್ ತಿಂಗಳಲ್ಲಿ ಕ್ರಯ ಪತ್ರ ಮಾಡಿಕೊಟ್ಟಿದ್ದಾರೆ ಅಂತಾ ದಾಖಲೆಯನ್ನು ತೆಗೆಸಿ ನೋಡಿದಾಗ ಗೊತ್ತಾಗಿದೆ. ಈ ದಾವಾ ಸಲ್ಲಿಸಿದ ಆರು ತಿಂಗಳ ಹಿಂದೆ ನನಗೆ ಕ್ರಯ ಪತ್ರದ ಬಗ್ಗೆ ಗೊತ್ತಾಗಿರುತ್ತದೆ ನಾವು ಕಂದಾಯ ಅಧಿಕಾರಿಗಳ ಮುಂದೆ ಕ್ರಯ ಪತ್ರವು ಕಾನೂನುಬಾಹಿರವಾಗಿದೆ ಅಂತಾ ಪ್ರಶ್ನಿಸಿರುವುದಿಲ್ಲಾ. ಸಾಕ್ಷಿ ಮುಂದುವರೆದು ನಮ್ಮ ತಂದೆಗೆ ಕೇಳಿದ್ದೇವೆ, ಅವರು ಭಾಗ ಮಾಡಿಕೊಡಲು ನಿರಾಕರಿಸಿದ್ದರಿಂದ ನಾವು ಈ ದಾವಾ ಸಲ್ಲಿದ್ದೇವೆ ಅನ್ನುತ್ತಾರೆ. 5 ನೇ ಪ್ರತಿವಾದಿಯ ಹೆಸರಿಗೆ 2 ನೇ ಪ್ರತಿವಾದಿ ಯಾವ ದಿನಾಂಕದಂದು ಕ್ರಯ ಪತ್ರ ಬರೆದುಕೊಟ್ಟಿದ್ದಾರೆ ಅಂತಾ ನನಗೆ ಗೊತ್ತಿಲ್ಲಾ. 5 ನೇ ಪ್ರತಿವಾದಿಯ ಹೆಸರಿಗೆ ಯಾವ ಡ.ನಂಬರು ಪ್ರಕಾರ ಮಂಜೂರಾಗಿದೆ ಅಂತಾ ನನಗೆ ಗೊತ್ತಿಲ್ಲಾ. 2 ನೇ ಪ್ರತಿವಾದಿ 5 ನೇ ಪ್ರತಿವಾದಿಗೆ ಬರೆದು ಕೊಟ್ಟ ಕ್ರಯ ಪತ್ರದ ಮೇರೆಗೆ 5 ನೇ ಪ್ರತಿವಾದಿಯ ಹೆಸರು ಕಂದಾಯ ದಾಖಲೆಗಳಲ್ಲಿ

ನಮೂದಾಗಿದೆ ಅಂದ್ರೆ ನಿಜ. ಸದರಿ ಕ್ರಯ ಪತ್ರವು ಕಾನೂನುಬಾಹಿರವಾಗಿದೆ ಅಂತಾ ಕಂದಾಯಾಧಿಕಾರಿಗಳ ಮುಂದೆ ಮೇಲ್ಮನವಿ ಸಲ್ಲಿಸಿರುವುದಿಲ್ಲಾ.

ನಾನು ಬಿ.ಎಡ್ ಪದವಿಯನ್ನು 2008 ರಲ್ಲಿ ಮುಗಿಸಿದ್ದೇನೆ. ಎಲ್ಲ ವಾದಿಯರ ವಿದ್ಯಾಭ್ಯಾಸವನ್ನು ನಮ್ಮ ತಂದೆಯ ತಾಯಿಯ ಜೊತೆಗೆ ಇದ್ದಾಗಲೇ ಮುಗಿಸಿದ್ದೇವೆ ಅಂದ್ರೆ ನಿಜ. ನಮ್ಮ ಕುಟುಂಬದಲ್ಲಿ ನಾವು ನಾಲ್ಕು ಜನ ವಾದಿಯರು ಮತ್ತು 1 ಮತು 2 ನೇ ಪ್ರತಿವಾದಿಯರು ಮಾತ್ರ ವಾಸವಾಗಿದ್ದೆವು ಅಂದ್ರೆ ನಿಜ ನಮ ಕುಟುಂಬದಲ್ಲಿ 2 ನೇ ವಾದಿಗೆ ಮೊದಲು 2016 ರಲ್ಲಿ ನೌಕರಿ ಸಿಕ್ಕಿರುತ್ತದೆ. 3 ನೇ ವಾದಿ ಐದಾರು ವರ್ಷಗಳಿಂದ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾನೆ. 4 ನೇ ವಾದಿ ವ್ಯವಸಾಯ ಮಾಡುತ್ತಿದ್ದಾನೆ. ನಾವು ಹೆಣ್ಣು ಮಕ್ಕಳು ಮದುವೆಯ ನಂತರ ಗಂಡನ ಮನೆಯಲ್ಲಿ ವಾಸವಾಗಿದ್ದೇವೆ. 3 ನೇ ವಾದಿ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. 4 ನೇ ವಾದಿ ನೀರಲಗಿ ಗ್ರಾಮದಲ್ಲಿ ವಾಸವಾಗಿದ್ದಾನೆ. 1 ಮತ್ತು 2 ನೇ ಪ್ರತಿವಾದಿಯರು ಹಾವೇರಿಯಲ್ಲಿ ವಾಸವಾಗಿದ್ದಾರೆ. ನಮ್ಮ ಸಂಬಂಧಿಕರು ಹಣಕಾಸಿನ ಸಹಾಯಮಾಡಿದ್ದಾರೆ, ಆದರೆ ಯಾರು ಎಷ್ಟು ಸಹಾಯ ಮಾಡಿದ್ದಾರೆ ಯಾವಾಗ ಸಹಾಯಮಾಡಿದ್ದಾರೆ ಅಂತಾ ನನಗೆ ನೆನಪಿಲ್ಲಾ. ನಾವು ಆ ಬಗ್ಗೆ ಲೆಕ್ಕ ಪತ್ರ ಇಟ್ಟಿರುವುದಿಲ್ಲಾ ನಮ್ಮ ತಾಯಿ ಇಟ್ಟಿರಬಹುದು, ಇಲ್ಲದೇ ಇರಬಹುದು. ನಮ್ಮ ತಂದೆಗೆ ಇಸ್ಪೀಟ್ ಆಡುವುದು ಮತ್ತು ಕುಡಿತದ ಚಟ ಹೊರತುಪಡಿಸಿ ಬೇರೆ ಚಟ ಇರುವುದಿಲ್ಲಾ. ನಮ ತಂದೆಗೆ ಇಸ್ಪೀಟ್ ಆಡುವುದು ಮತ್ತು ಕುಡಿತದ ಚಟ ಇತ್ತು ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದ್ರೆ ಸರಿಯಲ್ಲಾ. ನಮ್ಮ ತಂದೆಯ ಒಳ್ಳೆಯ ಬಾಂಕ್ ಅಧಿಕಾರಿ ಅಂದ್ರೆ ಸರಿಯಲ್ಲಾ. ನನ್ನ ಮದುವೆಯನ್ನು 1 ಮತ್ತು 2 ನೇ ಪ್ರತಿವಾದಿಯರು ಮಾಡಿರುವುದಿಲ್ಲಾ. ನಮ್ಮ ಚಿಕ್ಕಪ್ಪ ದೊಡ್ಡಪ್ಪ ಮಾಡಿದ್ದಾರೆ ಅನ್ನುತ್ತಾರೆ. ಸಂಬಂಧಿಕರಲ್ಲಿ ಮದುವೆಯಾಗಿರುವುದರಿಂದ ಹೆಚ್ಚು ಹಣ ಖರ್ಚಾಗಿರುವುದಿಲ್ಲಾ. 2 ನೇ ಪ್ರತಿವಾದಿಯು 5 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯ ಪತ್ರಕ್ಕ ಯಾರು

ಯಾರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆಂದು ನನಗೆ ಗೊತ್ತಿಲ್ಲಾ. ಆ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನ ಪಟ್ಟಿರುವುದಿಲ್ಲಾ. ನಮ್ಮ ತಂದೆ ನಮ್ಮ ತಾಯಿಗೆ ದಾವಾ ಆಸ್ತಿಗಳನ್ನು ಹಸ್ತಾಂತರಿಸಿದ್ದು ಕಾನೂನುಬಾಹಿರ ಎಂದು ಕಂದಾಯಾಧಿಕಾರಿಗಳ ಮುಂದೆ ಪ್ರಶ್ನಿಸಿರುವುದಿಲ್ಲಾ. 1 ಮತ್ತು 2 ನೇ ಪ್ರತಿವಾದಿಯರು ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲಾ ಆ ವಿಚಾರವನ್ನು ನಾನು 1 ಮತ್ತು 2 ನೇ ಪ್ರತಿವಾದಿಯರಿಗೆ ಕೇಳಿರುವುದಿಲ್ಲಾ. 1 ಮತ್ತು 2 ನೇ ಪ್ರತಿವಾದಿಯರು ಕಳೆದ 6-7 ವರ್ಷಗಳಿಂದ ಹಾವೇರಿಯಲ್ಲಿ ವಾಸವಾಗಿದ್ದಾರೆ. ಅದಕ್ಕಿಂತ ಪೂರ್ವದಲ್ಲಿ ನಮ್ಮ ತಂದೆ ಕೆಲಸ ಮಾಡುತ್ತಿದ್ದ ಸ್ಥಳದಲ್ಲಿ ನಾವು ವಾಸವಾಗಿರುತ್ತಿದ್ದೆವು. 1 ಮತ್ತು 2 ನೇ ಪ್ರತಿವಾದಿಯರು ವಾಸಿಸುವ ಮನೆಯ ಜಾಗೆಯನ್ನು ಯಾವ ಸಾಲಿನಲ್ಲಿ ಖರೀದಿಸಿದ್ದಾರೆ ಅಂತಾ ನನಗೆ ಗೊತ್ತಿಲ್ಲಾ. 1 ಮತ್ತು 2 ನೇ ಪ್ರತಿವಾದಿಯರು ವಾಸಿಸುವ ಮನೆಯನ್ನು 15 ವರ್ಷಗಳ ಹಿಂದೆ ಕಟ್ಟಿಸಿದ್ದಾರೆ. ಆ ಜಾಗೆಯಲ್ಲಿ ಒಟ್ಟು ಮೂರು ಮನೆಗಳನ್ನು ಕಟ್ಟಿದ್ದಾರೆ. ಅಂದರೆ ನೆಲ ಅಂತಸ್ತು ಮತ್ತು ಮಹಡಿ ಮನೆಗಳನ್ನು ಕಟ್ಟಿಸಿದ್ದಾರೆ. 1 ಮತ್ತು 2 ನೇ ಪ್ರತಿವಾದಿಯರು ಯಾವ ಮನೆಯಲ್ಲಿ ವಾಸವಾಗಿದ್ದಾರೆ ಅಂತಾ ನನಗೆ ಗೊತ್ತಿಲ್ಲಾ. ಆ ಮನೆಯ ಉತಾರೆಯನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿಲ್ಲಾ ಮತ್ತು ಈ ದಾವೆಯಲ್ಲಿ ಸೇರಿಸಿರುವುದಿಲ್ಲಾ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ